# “ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಈ ರೀತಿ ಮಾಡಿರಿ”

*“ನಾನು ನಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ - ಕರ್ತನಾದ ಯೇಸು ತಾನು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿ ಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು - ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು - ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ ಅಂದನು. ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ”*
*(1 ಕೊರಿಂಥ 11:23-26).*

ಕರ್ತನ ಭೋಜನವನ್ನು ನಿರಂತವಾದ ಸಂಸ್ಕಾರವನ್ನಾಗಿ ಯೇಸು ತನ್ನ ಶಿಷ್ಯರಿಗೆ ನೀಡುವಾಗ, ಕರ್ತನ ಭೋಜನದಲ್ಲಿರುವ ನೆನಪು ಮಾಡಿಕೊಳ್ಳುವ ಸ್ವಭಾವತ ಸಂಗತಿಯನ್ನು ತಿಳಿಸಿದನು. ರೊಟ್ಟಿ ಮತ್ತು ಪಾನ ಪಾತ್ರೆಗೆ ಎರಡು ಸಾರಿ ಕೃತಜ್ಞತೆ ಸಲ್ಲಿಸಿದ ನಂತರ, “ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಈ ರೀತಿ ಮಾಡಿರಿ” ಎಂಬ ಬುದ್ಧಿ ಮಾತು ಹೇಳಿದನು.

ಕರ್ತನ ಭೋಜನದ ನೆನಪನ್ನು ಮಾಡುವಾಗ, ಅದರಲ್ಲಿ ಅಡಗಿದ್ದ ಮೂರು ಪ್ರಮುಖವಾದ ಗುಣಲಕ್ಷಣಗಳನ್ನು ತಿಳಿಸಿದನು. ಅದನ್ನು ಮುಂದುವರೆಸಬೇಕೆಂಬ ಸೂಚನೆಯನ್ನು ನೀಡಿದನು. ಭವಿಷ್ಯದಲ್ಲಿ, ಕರ್ತನ ಭೋಜನದಲ್ಲಿ ಪಾಲುಗಾರರಾಗುವಾಗ ಅವರು ಆತನನ್ನು ನೆನಪು ಮಾಡಬೇಕಿತ್ತು. ಎರಡನೆಯದಾಗಿ, ಕರ್ತನ ಭೋಜನದ ಮಹತ್ವದ ಅಂಶವನ್ನು ತಿಳಿಸಿದನು. ಅದನ್ನು ಆತನ ಗೌರವಕ್ಕಾಗಿ ಮಾಡಬೇಕಿತ್ತು; “*ನನ್ನನ್ನು* ನೆನಸಿಕೊಳ್ಳುವದಕ್ಕೋಸ್ಕರ ಈ ರೀತಿ ಮಾಡಿರಿ” (1 ಕೊರಿಂಥ 11:24; ಒತ್ತಿ ಹೇಳಿದ್ದು ನನ್ನದು). ಹಿಂದಿನದನ್ನು ನೆನಪಿಸುವದು ಮೂರನೆಯ ಸಂಗತಿಯಾಗಿದೆ. ಅಂದರೆ ಹಿಂದಿನದನ್ನು ನೆಪಿಸಬೇಕಿತ್ತು.

ಇಬ್ರಿಯ 10:1-3 ರಲ್ಲಿ, ಹಳೇ ಒಡಂಬಡಿಕೆಯ ಯಜ್ಞಗಳ ಜ್ಞಾಪಕ ಎಂದು ತಿಳಿಸಲಾಗಿದೆ. ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯನ್ನು ಮಾತ್ರ ತಿಳಿಸಲಾಗಿತ್ತು, ಅದು ನಿಜಸ್ವರೂಪವಾಗಿರಲಿಲ್ಲ. ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾಗದು. ತಂದಿದ್ದ ಪಕ್ಷದಲ್ಲಿ ಆ ಯಜ್ಞ ಸಮರ್ಪಣೆಯು ನಿಂತು ಹೋಗುತ್ತಿತ್ತಲ್ಲಾ. ಯಾಕೆಂದರೆ ದೇವಾರಾಧನೆ ಮಾಡುವವರು ಒಂದೇ ಸಾರಿ ಶುದ್ಧಿಕರಿಸಲ್ಪಟ್ಟ ಮೇಲೆ ಅವರಿಗೆ ಪಾಪುಂಟೆಂದು ಅವರ ಮನಸ್ಸು ಇನ್ನು ಸಾಕ್ಷಿ ಕೊಡುವದು ಹೇಗೆ? ಆ ಯಜ್ಞಗಳಿಂದ ಪದೇ ಪದೇ ಪಾಪದ ಇನ್ನು ಸಾಕ್ಷಿ ಕೊಡುವದು ಹೇಗೆ ಆ ಯಜ್ಞಗಳಿಂದ *ಪದೇ ಪದೇ* ಪಾಪದ ಜ್ಞಾಪಕವುಂಟಾಗುತ್ತಿತ್ತು (ನೆನಪು; KJV; ಇಬ್ರಿಯ 10:1-3; ಒತ್ತಿ ಹೇಳಿದ್ದು ನನ್ನದು).

ಹಳೇ ಒಡಂಬಡಿಕೆಯಲ್ಲಿ ನೆನಪಿನ ಮೂಲವನ್ನು ತಿಳಿಸಲಾಗಿದೆ. ಅವರು ಅವುಗಳನ್ನು ಮಾಡುವಾಗ ಪಾಪಗಳ ನೆನಪು ಉಂಟಾಗುತ್ತಿತ್ತು. ಕರ್ತನ ಭೋಜನದಲ್ಲು ಸಹ ಇದೇ ವಿಧ

ವಾದ ಅರ್ಥವನ್ನು ಕಾಣುತ್ತೇವೆ. ಕರ್ತನ ಭೋಜನದಲ್ಲಿ ಪಾಲುಗಾರನಾದವನು ಕರ್ತನಾದ ಯೇಸುವನ್ನೇ ನೆನಪು ಮಾಡುತ್ತಿದ್ದನು.

ಕರ್ತನ ಭೋಜನದ ಕುರಿತ ಗುಣಲಕ್ಷಣಗಳನ್ನು ಧ್ಯಾನ ಮಾಡೋಣ, ಯೇಸುವಿನ "ನೆನಪಿನ" ಭೋಜನದ ಕ್ರಮವನ್ನು ಗಮನಿಸೋಣ.

## ಆತನು ಏನು ಮಾಡಿದನು

ನಾವು ಅದರಲ್ಲಿ ಪಾಲುಗಾರರಾಗುವಾಗ, *ಹಿಂದೆ ಆತನು ಮಾಡಿರುವ ಸಂಗತಿಗಳ ನೆನಪು ಮಾಡಿಕೊಳ್ಳುತ್ತೇವೆ.* ಇದು ಕರ್ತನ ಭೋಜನದ ಇತಿಹಾಸ ಭಾಗವಾಗಿದೆ. ಯೇಸುವಿನಲ್ಲಿ ನಡೆದ ನಿಜ ಘಟನಗಳನ್ನು ನೆನಪು ಮಾಡುತ್ತೇವೆ. ದೇವರ ವಾಕ್ಯವೆಂಬ ಭೂದುಗನ್ನಡಿಯ ಮೂಲಕ, ಯೇಸುವಿನ ವಿಚಾರಣೆ, ವೇದನೆ ಶಿಲುಬೆಯ ಪಯಣ, ಶಿಲುಬೆಯಲ್ಲಿ ಉಂಟಾದ ಆರು ತಾಸುಗಳ ಹಿಂಸೆ, ಹಾಗೂ ಕ್ರೂಜಿಯ ಸತ್ತ ಜರುಗಿದ ಸಂಗತಿಗಳನ್ನು ಗಮನಿಸುತ್ತೇವೆ.

ಯೇಸುವಿನ ನಿಜ ಜೀವನ ಮರಣ ಪುನರುತ್ಥಾನಗಳಲ್ಲಿ ಕ್ರೈಸ್ತತ್ವವು ತನ್ನ ನಿಜವಾದ ಇತಿಹಾಸವನ್ನು ಹೊಂದಿರುತ್ತದೆ. ಇತರ ಯಾವುದೇ ಧರ್ಮಗಳಲ್ಲಿ ಈ ವಿಧವಾದ ಇತಿಹಾಸದ ಮೂಲವನ್ನ ಕಾಣುವದಿಲ್ಲ.

## ಆತನು ಅದನ್ನು ಹೇಗೆ ನಿರ್ವಹಿಸಿದನು

*ಕರ್ತನ ಭೋಜನದಲ್ಲಿ ಪಾಲುಗಾರರಾಗುವಾಗ, ಆತನು ಅದನ್ನು ಹೇಗೆ ನಿರ್ವಹಿಸಿದನು* ಎಂಬ ವಿಚಾರದ ಗಮನ ಉಂಟಾಗುತ್ತದೆ. ಅದು ಕೇವಲ ಸಾಧಾರಣವಾದ ಮರಣವಾಗಿರದೆ, ಅದು ದೇವರ ಮಗನ ಮರಣವೇ ಆಗಿತ್ತು.

ಯೇಸುವಿನ ಮರಣವು ಹೇಗೆ ಉಂಟಾಯಿತು ಎಂದು ಅರಿಯದೆ, ಒಬ್ಬನು ಆತನ ಮರಣವನ್ನು ಅರಿಯಲಾರನು. ಪೇತ್ರನು ಯೇಸುವಿನ ಕುರಿತು, "ಆತನು ಯಾವ ಪಾಪವನ್ನು ಮಾಡಲಿಲ್ಲ, ಆನ ಬಾಯಲ್ಲಿ ಯಾವ ವಂಚನೆಯು ಸಿಕ್ಕಲಿಲ್ಲ ಬೈಯ್ಯುವವರನ್ನು ಆತನು ಪ್ರತಿಯಾಗಿ ಬೈಯ್ಯಲಿಲ್ಲ; ಆತನು ಭಾಧೆಯನ್ನನುಭವಿಸಿದಾಗ ಯಾರನ್ನು ಬೆದರಿಸದೆ ನ್ಯಾಯವಾಗಿ ತೀರ್ಪು ಮಾಡುವವನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು" (1 ಪೇತ್ರ 2:22, 23). ಕ್ರೂಜೆಯ ಕುರಿತಾದ ಚಿತ್ರಣದಲ್ಲಿ, ಮೂರು ನಿಷೇದಾರ್ಥಕ ಹಾಗೂ ಒಂದು ಗುಣಾತ್ಮಕವಾದ ಸಂಗತಿಗಳನ್ನು ಗಮನಿಸುತ್ತೇವೆ: ಆತನು ಪಾಪ ಮಾಡಲಿಲ್ಲ, ಪರತಿರೋದ ಮಾಡಲಿಲ್ಲ, ಮುಯ್ಯಿ ತೀರಿಸಲಿಲ್ಲ, ಆದರೆ ದೇವರಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು.

ಯೇಸುವಿನ ಶಿಲುಬೆಯ ವಿಚಾರದಲ್ಲಿ ಒಂದು ಹಂತವನ್ನು ತಲುಪಿ; "ನಾನು ದೇವರ ಮಗನ ಮರಣವನ್ನು ಗಮನಿಸುತ್ತಿದ್ದೇನೆ!" ಪ್ರತಿ ಕರ್ತನ ದಿನವನ್ನು ಶತಾಧಿಪತಿಯ ಪಾದದಲ್ಲಿ ನೋಡುತ್ತೇವೆ. ಹೌದು ನಾವುಗಳೇ ಆತನನ್ನು ಶಿಲುಬೆಗೆ ಹಾಕಿದವರು ಎಂದು ಅರಿತರು ಆತನ ಕ್ರೂರವಾದ ಹಿಂಸೆಗಳನ್ನು ಗಮನಿಸಿದ ನಂತರ, "ನಿಜವಾಗಿ ಈತನು ನಿರ್ದೋಷಿ" ಎಂದು ಪ್ರಕಟಿಸಲೇಬೇಕು (ಲೂಕ 23:47). ಹೌದು "ನಿಜವಾಗಿಯೂ ಈತನು ದೇವರ ಮಗನೆಂದು ಪ್ರಕಟಿಸಲೇಬೇಕು" (ಮತ್ತಾಯ 27:54). ಆತನ ರಕ್ತದ ಕುರಿತು ಯೋಹಾನನು (1 ಯೋಹಾನ 5:8); ಆತನು ಪರಲೋಕದ ಸದ್ಗುಣಕೆ, ಆತನ ರಕ್ತವೇ ಸಾಕ್ಷಿಯಾಗಿದೆ" ಎಂದು ಬರೆದಿರುವನು.

## ಅದನ್ನು ಏಕೆ ಮಾಡಿದನು

*ನಾವು ಕರ್ತನ ಮೇಜಿನ ಬಳಿ ಕೂತುಕೊಳ್ಳುವಾಗ, ಆ ಕಾರ್ಯವನ್ನು ಆತನು ಏಕೆ ಮಾಡಿದನು ಎಂದು ಆಲೋಚಿಸುತ್ತೇವೆ.* ಇದು ಕರ್ತನ ಭೋಜನದಲ್ಲಿರುವ ಅನ್ಯೋನ್ಯತೆಯಾಗದೆ. ನಾವು ನಮ್ಮ ಕರ್ತನೊಂದಿಗೆ ಕೂತುಕೊಂಡು ಆತನ ಮರಣದ

ಅನುಭವವನ್ನು ನೆನಪು ಮಾಡುತ್ತೇವೆ.

ಇದನ್ನು "ನಿಮಗಾಗಿ ಮಾಡಿರುವೆನು" ಎಂದು ತನ್ನ ವಿವರಣೆಯಲ್ಲಿ ಎರಡು ಸಾರಿ ತಿಳಿಸಿರುವನು (ಲೂಕ 22:19, 20). ಆತನ ದೇಹವನ್ನು "ನಮಗಾಗಿ ನೀಡಲಾಗಿದೆ" "ಪಾತ್ರೆಯು ನಮಗಾಗಿ ಸುರಿಯಲ್ಪಟ್ಟಿದೆ" ಎಂದಿರುವನು. ಆತನು ನಮಗಾಗಿ ಮರಣವನ್ನು ಅನುಭವಿಸಿದನು. ತನ್ನ ಪಾಪಗಳಿಗಾಗಿ ತಾನು ನ್ಯಾಯವಾದ ಮರಣವನ್ನು ಅನುಭವಿಸಿದನು. ಆತನು ನಮಗಾಗಿ ಗಾಯಗೊಂಡನು, ಅವಮಾನವನ್ನು ಹೊಂದಿದನು, ಉಗುಳಿಸಿಕೊಂಡನು, ಶಿಲುಬೆಯಲ್ಲಿ ಮೊಳೆಯಿಂದ ಜಡಿಯಲ್ಪಟ್ಟನು, ಪರಲೋಕ ಭೂಲೋಕಗಳ ನಡುವೆ ನೇತಾಡ ಲ್ಪಟ್ಟನು (ತೂಗಾಡಲ್ಪಟ್ಟನು) ಅಂತಿಮವಾಗಿ ಮರಣವನ್ನು ಹೊಂದಿದನು.

ತಾನು ಮರಣ ಹೊಂದುವ ಸಾಯಂಕಾಲದಲ್ಲಿ, ಯೇಸು "ನನ್ನನ್ನು ನೆನಸುವದಕ್ಕೋಸ್ಕರ ಈ ರೀತಿಮಾಡಿರಿ" ಅಂದನು. "ನೆನಸು" ಎಂಬ ಪದದಲ್ಲಿ ಆಳವಾದ ಅರ್ಥವಿದೆ, ಕ್ರೈಸ್ತರೆಲ್ಲರೂ ವಾರದ ಮೊದಲನೆಯ ದಿನದಲ್ಲಿ ಒಟ್ಟಾಗಿ ಸೇರಿ ಯೇಸುವಿನ ಮರಣವನ್ನು ಜ್ಞಾಪಕ ಮಾಡುವಂಥದ್ದಾಗಿದೆ (ಅಪೊಸ್ತಲರ ಕೃತ್ಯಗಳು 20:7). ಅದರಲ್ಲಿ ದೂರದ ನೆನಪು ಸಹ ಒಳಗೊಂಡಿದೆ, ಆತನ ಎರಡು ಸಾವಿರ ವರುಷಗಳ ಹಿಂದಿನ ಜೀವಿತವನ್ನು ಆತನ ಅನುಯಾಯಿಗಳು ನೆನಪು ಮಾಡುವದಾಗಿದೆ. ಆ ಪದದಲ್ಲಿ ಅನ್ಯೋನ್ಯತೆಯು ಅಡಕವಾಗಿದೆ. ಈ ಭೋಜನವನ್ನು ತೆಗೆದುಕೊಳ್ಳುವಾಗ, ಕ್ರೈಸ್ತರು ಯೇಸುವಿನೊಂದಿಗೆ ಅನ್ಯೋನ್ಯತೆಯನ್ನು ಹೊಂದುತ್ತಾರೆ. ಆತನು ತನ್ನ ಅಪೊಸ್ತಲರಿಗೆ, "ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವದೇ ಇಲ್ಲ" ಎಂದು ಹೇಳಿದನು (ಮತ್ತಾಯ 26:29). ಆ ಪದದಲ್ಲಿ ಮುಂದುವರೆಯುವ ಕಾರ್ಯ ಅಡಕವಾಗಿದೆ, ಕ್ರೈಸ್ತರು ಆ ಮೇಜಿನ ಬಳಿಯಲ್ಲಿ ಪಾಲು ತಕ್ಕೊಳ್ಳುವ ಕಾರ್ಯವನ್ನು ಕರ್ತನು ಪುನಃ ಬರುವವರೆಗೆ ಮಾಡುತ್ತಾರೆ. ಪಾಲು ತಕ್ಕೊಳ್ಳವಾಗ ಅವರಿಗೆ ಜೀವವು ಉಂಟಾಗುತ್ತದೆ. ಆ ಪದದಲ್ಲಿ ಪರಿಶುದ್ಧತೆಯೂ ಸಹ ಅಡಕವಾಗಿದೆ, ಇದರಲ್ಲಿ ಪಾಲುದಾರರಾಗುವಾಗ, ಲೋಕದಲ್ಲಿ ಅತಿ ಪರಿಶುದ್ಧವಾದ, ಹಾಗೂ ಪ್ರಸಿದ್ಧವಾದ ಯೇಸುವಿನ ಮರಣವನ್ನು ಪ್ರಚುರಪಡಿಸುತ್ತಾರೆ.

## ಮುಕ್ತಾಯ

ಕರ್ತನದಿನದಲ್ಲಿ ಒಟ್ಟಾಗಿ ಸೇರಿ ಲೋಕಕ್ಕೆ ಹೋಲಿಸಲಾರದ ಐಕ್ಯತೆಯನ್ನು ಪ್ರಸಿದ್ಧಿ ಪಡಿಸೋಣ. ಕರ್ತನ ಮೇಜಿನ ಸುತ್ತಲೂ ಸೇರಿ ಬರುವ ಆತನ ಕುಟುಂಬವಾಗಿದೆ. ಕರ್ತನ ಮೇಜಿನ ಮುಖಾಂತರ ನಮ್ಮ ಮನಸ್ಸನ್ನು ಆಳವಾಗಿ ಯೇಸುವಿನ ಮೇಲೆ ಕೇಂದ್ರೀಕರಿಸೋಣ. ಆತನು ಮಾಡಿರುವ ಕಾರ್ಯವನ್ನು ಏಕೆ ಹೇಗೆ ಮಾಡಿದನೆಂದು ನೆನಪು ಮಾಡಿ, ದೇವರ ಮಗನೊಂದಿಗೆ ನಿಖರವಾದ ಅನ್ಯೋನ್ಯತೆಯನ್ನು ಹೊಂದಿಕೊಳ್ಳೋಣ.

*"ಬಳಿಕ ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು - ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" (ಲೂಕ 22:19, 20).*